ಚುಕ್ಕೆಗಳ ರಸ್ಸೆಯಿಂದ ಸಚಿತ್ರವಾಗುತ್ತಿತ್ತು. ಮತ್ತೊಂದು ನಾಯಿ ತನ್ನೊಡೆಯನ ಪ್ರೀತಿ ಪಡೆಯಲು ಹವಣಿಸಿದರೆ ಉಗ್ರವಾಗಿ ಕಚ್ಚಿ ಓಡಿಸುತ್ತಿದ್ದಳು. ಆಕೆ ಕುಣಿದಾಡಿ ಎಗರಾಡಿ ಆವೇಶವೆಲ್ಲ ಇಳಿದು ಅವರ ಕಾಲುಗಳ ನಡುವೆ ಉಜ್ಜಿಕೊಂಡು ಸುಳಿದಾಡುತ್ತ ಸೌಮ್ಯವಾದ ಬಳಿಕವಷ್ಟೆ, ಪ್ರೊಫೆಸರ್ ಮುಂದಿನ ಕೆಲಸಕ್ಕೆ ತೊಡಗಬೇಕಿತ್ತು.

ಹೀಗಿರುತ್ತ ಶ್ರಾವಣ ಮಾಸವು ನಾಡಿಗೂ ಬೀಡಿಗೂ ಆಗಮಿಸಲು ಬುರ್‍ರಿ ಬೆದೆಗೆ ಬಂದಳು. ಪ್ರೊಫೆಸರ್ ಮನೆಸುತ್ತ ಗ್ರಾಮಸಿಂಹಗಳು ಸುಳಿದಾಡತೊಡಗಿದವು. ಚೆಲುವೆಯಾಗಿದ್ದ ಬುರ್‍ರಿಯ ಸ್ವಯಂವರಕ್ಕೆ ಬಂದ ವರಗಳು ಬಾಲತುಂಡಾದ, ಮೆಳ್ಳೆಗಣ್ಣಿನ, ಕಾಲುಸೊಟ್ಟಾದ, ನೋಡಲು ಕಳ್ಳನಂತಿರುವ, ತಲೆಗೂದಲು ಮೇಲಕ್ಕೆದ್ದಿರುವ ಅಕರಾಳ ವಿಕರಾಳರಾಗಿದ್ದರು. ಪ್ರೊಫೆಸರ್‌ಗೆ ಬುರ್‍ರಿಯ ಶೀಲರಕ್ಷಣೆಯ ಉದ್ದೇಶವೇನೂ ಇರಲಿಲ್ಲ. ಬೀದಿನಾಯಿಯ ಚರ್ಮರೋಗಗಳು ತಗುಲಬಾರದೆಂದು ಆಕೆಯನ್ನು ರಕ್ಷಿಸುತ್ತಿದ್ದರು. ಇದಕ್ಕಾಗಿ ಆಕೆಯನ್ನು ಮನೆಯಲ್ಲಿ ಕೂಡಿಹಾಕಿ ಹೊರಗೆ ಹೋಗುವುದು; ಸಂಜೆ ಹೊರಹೊರಡಿಸಿಕೊಂಡು ವಾಯುವಿಹಾರಕ್ಕೆ ಕರೆದುಕೊಂಡು ಹೋಗುವುದು ಮಾಡಲಾರಂಭಿಸಿದರು. 'ನೀವು ಲೈಂಗಿಕ ಹಕ್ಕುಗಳ ಮೇಲೆ ಮಾತಾಡುವವರು. ಹೀಗೆ ನಿರ್ಬಂಧಿಸುವುದು ತಪ್ಪು' ಎಂದೆ ನಾನು. ಬುರ್‍ರಿ ಸೆರೆವಾಸ ಒಂದು ದಿನ ಸಹಿಸಿದಳು. ಎರಡನೆಯ ದಿನ ಹಾಸಿಗೆ ದಿಂಬುಗಳನ್ನು ಚಿಂದಿಮಾಡಿ ಆಕ್ರೋಶ ಪ್ರಕಟಿಸಿದಳು. ಮೂರನೆಯ ದಿನ ಮನೆಯೊಳಗಿಂದಲೇ 'ನಾನಿಲ್ಲಿ ಕೈದಿಯಾಗಿದ್ದೇನೆ. ಹೇಗಾದರೂ ಬಿಡಿಸಿ' ಎಂದು ಇನಿಯರಿಗೆ ಸಿಳ್ಳುಸೂಚನೆ ಕೊಡಲಾರಂಭಿಸಿದಳು.

ಪ್ರೊಫೆಸರ್ ಆಕೆಯನ್ನು ಟೆರೇಸಿನ ಮೇಲೆ ಬಿಟ್ಟು, ಅಂದರ್ ಬಾಹರ್ ಯಾರೂ ಹೋಗಿಬರದಂತೆ ಗೇಟಿಗೆ ಬೀಗ ಜಡಿದರು. ಮನ್ಮಥನ ಮಾಯೆಯ ತೊಡಕನ್ನು ಮೀರಿದವರಾರು? ಒಂದು ಸಂಜೆ ಅವರು ಕಚೇರಿಯಿಂದ ಬರುವ ಹೊತ್ತಿನಲ್ಲಿ ನಾಯಿದಂಡು ಮನೆಸುತ್ತ ಸೇರಿ ಮಾಳಿಗೆಯತ್ತ ಮುಖಮಾಡಿ ನೋಡುತ್ತಿತ್ತು. ಕಾರಣ, ಬೀದಿರೌಡಿಯಂತಿದ್ದ ಒಂದು ನಾಯಿ, ಕಾಂಪೌಂಡು ಗೋಡೆ ಮೇಲಿಂದ ಕಿಟಕಿಯ ಶೆಜ್ಜಕ್ಕೆ ಹಾರಿ, ಅಲ್ಲಿಂದ ವೆಂಟಿಲೇಟರ್ ಮೇಲೆ ನೆಗೆದು, ಟೆರೇಸನ್ನು ತಲುಪುವಲ್ಲಿ ಯಶಸ್ವಿಯಾಗಿತ್ತು. ಮನದನ್ನೆಯನ್ನು ಕೂಡಲು ಉಪ್ಪರಿಗೆಯಿಂದ ಇಳಿಬಿದ್ದಿದ್ದ ಹೆಬ್ಬಾವನ್ನು ಹಗ್ಗವೆಂದು ಭ್ರಮಿಸಿ ಹತ್ತಿಹೋಗಿದ್ದ ಪ್ರೇಮಿಗಳ ಕತೆಗಳು ಉತ್ಪ್ರೇಕ್ಷೆಯಿಂದ ಹುಟ್ಟಿದವೇನಲ್ಲ. ಬುರ್‍ರಿ ಟೆರೇಸಿನಿಂದಲೇ ಆನಂದತುಂದಿಲಳಾಗಿ ಕುಂಯ್ಗುಡುತ್ತ, 'ನೋಡಿಲ್ಲಿ ನನ್ನ ಫ್ರೆಂಡು' ಎಂದು ಸಂತೋಷದಿಂದ ಬಾಲವಲ್ಲಾಡಿಸುತ್ತ ಕುಣಿದಳು – ಎಳೇಮಕ್ಕಳು ಗಾಜಿನಲೋಟ ಒಡೆದು ಅಮ್ಮನಿಗೆ ತಮ್ಮ ಸಾಹಸ ತೋರುವಂತೆ.

'ಯೂ ಬಿಚ್' ಎಂದವರೇ ಪ್ರೊಫೆಸರ್ ಕಲ್ಲುಗಳನ್ನು ಹೆಕ್ಕಿದರು. ಅವರ ಕೈಯೊಳಗಿನ ಶಿಲಾಯುಧವನ್ನೂ ಅವರ ಮುಖದಲ್ಲಿದ್ದ ಉಗ್ರತೆಯನ್ನೂ ಕಂಡು ಶೀಲಾಪಹರಣಕ್ಕೆ ಬಂದವರೆಲ್ಲ ಗೋಡೆ ಕಿಟಕಿ ಶಜ್ಜಗಳ ಹಂತಗಳಿಂದ ಹೈಜಂಪ್ ಲಾಂಗ್‌ಜಂಪ್ ಮಾಡಿ ದಿಕ್ಕಾಪಾಲಾದರು. ಬುರ್‍ರಿಯ ಪ್ರೇಮಪಾತ್ರವಾಗಿದ್ದ ರೌಡಿನಾಯಿ ನಾವ್ಯಾರೂ ಊಹಿಸಲಾಗದಂತೆ ಟೇರೇಸಿನಿಂದಲೇ ನೆಲಕ್ಕೆ ಲಂಘಿಸಿ ಪರಾರಿಯಾಯಿತು. ರತಿಕೂಟ ವಿಫಲವಾಗಲಿಲ್ಲ. ಬುರ್‍ರಿ ಗರ್ಭವತಿಯಾದಳು. ಪ್ರೊಫೆಸರ್ ನಮ್ಮಂತೆ ಹೊರಹಾಕುವ ಕ್ರೌರ್ಯ ತೋರಲಿಲ್ಲ. ಉಪಚಾರ ಶುರುಮಾಡಿದರು. ಶುಭಲಗ್ನದಲ್ಲಿ ಎರಡು ಮರಿಗಳ ಜನನವಾಯಿತು. ಪ್ರೊಫೆಸರ್ ಆಕೆಯ ಉಪಚಾರಕ್ಕೆ ಬೇಕಾದ ಬ್ರೆಡ್ಡು ಬಿಸ್ಕತ್ತುಗಳಲ್ಲದೆ,